■ ಸಸಿತೋಟ

ಜಪಾನಿನ ಸುಶಿ (ಮೀನಿನಿಂದ ತಯಾರಿಸುವ ವಿಶಿಷ್ಟ ತಿನಿಸು) ಉಪಾಹಾರಗೃಹವೊಂದು ಹರಾಜೊಂದರಲ್ಲಿ ಈ ಟ್ಯೂನಾ ಮೀನಿಗೆ ನೀಡಿದ ಹಣ ಬರೋಬ್ಬರಿ 3.1 ದಶಲಕ್ಷ ಡಾಲರ್ (ಅಂದಾಜು 21,55,27000 ರೂಪಾಯಿ). ಉಪಾಹಾರಗೃಹದ ಮಾಲೀಕರೇನೋ ದಾಖಲೆ ಮಾಡಿದ ಖುಷಿಯಲ್ಲಿದ್ದಾರೆ. ಆದರೆ ಗ್ರಾಹಕರಿಗೆ ಮಾತ್ರ ಕೈಗೆ ಬಿಲ್ ಬಂದಾಗಲೇ ಇನ್ನೊಂದು ದಾಖಲೆಯ ಅರಿವಾಗಬಹುದು.



ಮೆಕ್ಸಿಕೋದಲ್ಲಿ ಹೊಸ ವರ್ಷ ಬಂದರೆ ಸಾಕು, ವ್ಯಕ್ತಿಗಳನ್ನು ಶುದ್ಧಗೊಳಿಸುವ ಕಾರ್ಯ ಭರದಿಂದ ನಡೆಯುತ್ತದಂತೆ. ಧೂಪದ ಹೊಗೆಗಾಗಿ ಅಲೆಯಬೇಕಿಲ್ಲ, ವ್ಯಕ್ತಿಗೆ ಸಿಗರೇಟ್ ಹೊಗೆ ಹಾಕಿದರೆ ಶುದ್ಧವಾದಂತೆ. ಹೊಸತೇನಲ್ಲ ಬಿಡಿ, ಸಿಲಿಕಾನ್ ಸಿಟಿಯ ಸಾರ್ವಜನಿಕ ಬಸ್‌ಗಳಲ್ಲಿ ನಿತ್ಯವೂ ಶುದ್ಧೀಕರಣದ ಪ್ರಕ್ರಿಯೆ ನಡೆಯುತ್ತಿರುತ್ತದೆ ಅಲ್ಲವೇ?



ಅಮೆರಿಕಾದ ಓಹಿಯೋದಲ್ಲಿ ದಂಪತಿ ಮನೆಯೊಂದರ ಬಾಗಿಲು ಮುರಿದು ಒಳ ನುಗ್ಗಿದರು. ಮೊದಲು ಸ್ನಾನ ಮಾಡಿದರಂತೆ. ನಂತರ ಬಟ್ಟೆ ತೊಳೆದುಕೊಂಡು, ಕಾಫಿ ಮಾಡಿಕೊಂಡು ಕುಡಿದರಂತೆ. ಆಮೇಲೆ ಮನೆಯಲ್ಲಿದ್ದ ಒಡವೆ, ಹಣ, ಕಂಪ್ಯೂಟರ್, ಟಿವಿ ಎಂದೆಲ್ಲ ದೋಚಿ ತಾವು ತಂದಿದ್ದ ಟ್ರಕ್‌ನಲ್ಲಿ ತುಂಬಲಾರಂಭಿಸಿದರಂತೆ. ಅಷ್ಟರಲ್ಲಿ ಮನೆಯ ಯಜಮಾನಿ ವಾಪಸ್ಸಾಗಿ ಪೊಲೀಸರನ್ನು ಕರೆಸಿದ್ದರಿಂದ ಸೆರೆ ಸಿಕ್ಕರಂತೆ. ಈಗ ಜೈಲಿನಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿರುವ ದಂಪತಿ ತೊಳೆದ ಬಟ್ಟೆಯನ್ನೂ ಒಣಗಿಸಿಕೊಂಡು ಬರಬಹುದಿತ್ತು ಎಂದು ಹಳಹಳಿಸುತ್ತಿರಬಹುದು.

ಆಸ್ಟ್ರೇಲಿಯಾದ ಪರ್ಥ್‌ನ ಮನೆಯೊಳಗಿಂದ 'ನೀನ್ಯಾಕೆ ಸಾಯಬಾರದು?' ಎಂದು ಪುರುಷನೊಬ್ಬ ಕೂಗಾಡುವುದನ್ನೂ, ಮಗುವೊಂದು ಚೀರಾಡುವುದನ್ನೂ ಕೇಳಿದ ನೆರೆಯವ ಪೊಲೀಸರನ್ನು ಕರೆಸಿಯೇಬಿಟ್ಟ. ತಕ್ಷಣ ಸೈರನ್ ಹಾಕಿಕೊಂಡು ಬಂದ ಪೊಲೀಸರಿಗೆ ಕಂಡಿದ್ದು, ಜೇಡಕ್ಕೆ ಹೆದರಿ ದೂರದಿಂದಲೇ ಕೊಲೆ ಬೆದರಿಕೆ ಹಾಕುತ್ತಿದ್ದ ವ್ಯಕ್ತಿ ಹಾಗೂ ಆತನ ಪುಟ್ಟ ಮಗ. ಪೊಲೀಸರು ತನಿಖೆಯ ನಂತರ, 'ಒಂದು ಜೇಡರ ಹುಳಕ್ಕೆ ಅಲ್ಪಸ್ವಲ್ಪ ಗಾಯವಾಗಿದ್ದನ್ನು ಬಿಟ್ಟರೆ ಬೇರೆ ಯಾವ ಗಂಭೀರ ಗಾಯಾಳುಗಳಿಲ್ಲ. ಮುಂದಿನ ತನಿಖೆಯ ಅವಶ್ಯಕತೆಯಿಲ್ಲ' ಎಂದು ಬ್ಲಾಗ್‌ನಲ್ಲಿ ಬರೆದುಕೊಂಡರಂತೆ.



ಒಂದೊಂದು ಪ್ರದೇಶದಲ್ಲೂ ಹೊಸ ವರ್ಷ ಬರ ಮಾಡಿಕೊಳ್ಳುವ ರೀತಿ ಒಂದೊಂದು ರೀತಿ. ಫ್ಲಾರಿಡಾದ ಕೀ ವೆಸ್ಟ್ ಎಂಬಲ್ಲಿ ಈ ಡ್ರ್ಯಾಗ್ ಕ್ವೀನ್ (ಸ್ತ್ರೀಯಂತೆ ವೇಷ ಧರಿಸುವ ಪುರುಷ) ದೊಡ್ಡ ಕೆಂಪು ಶೂನಲ್ಲಿ ಶಾಂಪೇನ್ ಹಿಡಿದು ಬಂದು ಸ್ವಾಗತ ಕೋರುವುದು ಸಂಪ್ರದಾಯವಂತೆ.



ಯೂರೋಪ್‌ನಲ್ಲಿ ಈಗ ಹಬ್ಬಗಳ ಸಾಲು ಸಾಲು. ಅದರಲ್ಲೊಂದು ಸ್ಪೇನ್‌ನಲ್ಲಿ ಆಚರಿಸುವ 'ಹಿಟ್ಟಿನ ಹಬ್ಬ'. ಜನ ಹಿಟ್ಟನ್ನು ತೂರಿ ನಂತರ ಮೊಟ್ಟೆ ಎಸೆಯುತ್ತಾರಂತೆ. ಸ್ವಲ್ಪ ಉಪ್ಪು, ಖಾರ ಸೇರಿಸಿದರೆ ಆಮ್ಲೇಟ್ ಆಗುತ್ತಿತ್ತು, ಸಕ್ಕರೆ ಸೇರಿಸಿದರೆ ಕೇಕ್ ಆಗುತ್ತಿತ್ತು.